ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Saturday, 15th March, 1980/Phalguna, 25,1901 S.E.

The House met in the Assembly Chamber, Vidhana Soudha at Nine of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral answers were given)

Canal Works in Mulbagal Taluk

76 SRI J. M. REDDY (Mulbagal).—Will the Minister for Transport and Minor Irrigation be pleased to state —

whether the Government intend to construct canal from Hosahalli tank to Rajendrahalli tank in Mulbagal taluk with a view to utilise the water which flows towards Andhra Pradesh without any use ?

SRI M. M. J. SADYOJATHA (Minister for Transport and Minor Irrigation).—

No. It is under investigation.

ಶ್ರೀ ಜೆ. ಎಂ. ರೆಡ್ಡಿ.—ನನ್ನಪ್ರಶ್ನೆಗೆ ಉತ್ತರವಾಗಿ ತಾವು ತನಿಖೆ ಮಾಡುತ್ತಿದ್ದೇವೆಂದು ಉತ್ತರ ಕೊಟ್ಟಿದ್ದೀರಿ. ತನಿಖೆ ಮುಗಿದು ಸರ್ಕಾರಕ್ಕೆ ವರದಿ ಬಂದಿದೆಯೇ ? ನೀರು ಈಗ ಆಂಧ್ರ ಪ್ರದೇಶಕ್ಕೆ ಹೋಗುತ್ತಿದೆ ಅಲ್ಲಿ ಕಾಲುವೆ ಮಾಡಿದರೆ, ಅದರಿಂದ ರೈತರಿಗೆ ಅನುಕೂಲವಾಗುತ್ತದೆ, ಆದ್ದರಿಂದ ಸರ್ಕಾರದವರು ಇದನ್ನು ಪ್ರಸಕ್ತ ಸಾಲಿನಲ್ಲಿ ಮಾಡುತ್ತಾರೆಯೇ ಎಂದು ಕೇಳುತ್ತೇನೆ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದು ಇನ್ನೂ ತನಿಖೆಯಲ್ಲಿದೆ, ಆದಷ್ಟು ಬೇಗ ತನಿಖೆ ಮಾಡಿಸಿ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಜೆ. ಎಂ. ರೆಡ್ಡಿ. - ತನಿಖೆಯಾಗಿ ಬಂದಿದೆ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

† SRI M. M. J. SADYOJATHA (Minister for Transport and Minor Irrigation).—An estimate for feeder channel from Hosahalli tank to Rajendrahalli tank is prepared. The channel is proposed to feed both the tanks. The channel mostly run deep cutting at certain length. The approximate cost of the channel is 14.60 lakhs and

† Indicates that remarks or speeches have not been revised by the member concerned.

would benefit about 700 acres of land. The cost per acre is also worked out. The project is under d tailed investigation. ಇನ್‌ವೆಸ್ಟಿಗೇಷನ್ ಮುಗಿದ ತಕ್ಷಣ ಆದಷ್ಟು ಬೇಗ ವಿವರಗಳನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಜೆ. ಎಂ. ರೆಡ್ಡಿ.—ಆ ನೀರನ್ನು ಲಿಫ್ಟ್ ಮಾಡಿದರೆ ಆದರಿಂದ ತುಮಕೂರು ಜಿಲ್ಲೆಗೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ಕೆಲವು ಭಾಗಗಳಿಗೂ ಸಹ ಸಹಾಯಕವಾಗುತ್ತದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಗಮನಕ್ಕೆ ತಂದರೆ ವಿಚಾರ ಮಾಡುತ್ತೇನೆ.

Amadalli-Kanthriwada Road in Karwar Taluk

79 SRI D. V. WAINGANKAR (Karwar).—Will the Chief Minister be pleased to state :—

(a) the total length of the Amadalli-Kanthriwada fisheries road in Karwar Taluka;

b) whether it is a fact that there was incessant demand for taking up the road;

(c) if so, when was construction work started and the total length completed so far;

(d) the total number of C. D. works and bridges on this road;

(e) of which the number completed ?

SRI R GUNDU RAO (Chief Minister).—

(a) 1.05 KM

(b) Yes

(c) February 1973. The length completed—725 Mtrs.

(d) 2 Nos.

(e) Nil.

ಶ್ರೀ ಡಿ. ವಿ ವೈಗಾಂಕರ್.—ಸ್ವಾಮಿ ೧೯೭೩ನೇ ಇಸ್ವಿಯಲ್ಲಿ ೭೨೫ ಕಿ. ಮೀ. ರಸ್ತೆಯಾಗಿದ್ದು ಅಲ್ಲಿಂದ ಇಲ್ಲಿಯವರೆಗೆ, ಅಂದರೆ ೭ ವರ್ಷಗಳ ಕಾಲ ಬಾಕಿ ರಸ್ತೆಯ ಕಾಮಗಾರಿಯನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ ದಯವಿಟ್ಟು ಮಾನ್ಯ ಮಂತ್ರಿಗಳವರು ಕಾರಣ ಏನೆಂದು ತಿಳಿಸಬೇಕು.?

ಶ್ರೀ ಆರ್. ಗುಂಡೂರಾವ್.—ಅಲ್ಲಿ ಈ ಕೆಲಸಕ್ಕಾಗಿ ಪೂರ್ತಿ ಜಾಗವನ್ನು ಅಕ್ವಿಜಿಷನ್ ಮಾಡಬೇಕಾಗಿತ್ತು. ಆ ಜಾಗವನ್ನು ಅಕ್ವೈರ್ ಮಾಡಿ ಹ್ಯಾಂಡ್ ಓವರ್ ಮಾಡಿಕೊಟ್ಟರಲ್ಲಿ ಇದರಿಂದ ಆದನ್ನು ಬಡ್ಜೆಟ್‌ನಲ್ಲಿ ಸೇರಿಸಿರಲಿಲ್ಲ. ಹೀಗೆ ನಾನಾ ಕಾರಣಗಳಿಂದ ಪೂರ್ತಿ ಮಾಡುವುದಕ್ಕೆ ಆಗಲಿಲ್ಲ.

ಶ್ರೀ ಡಿ. ವಿ. ವೈಗಾಂಕರ್.—ಆ ರಸ್ತೆಯ ಕೆಲವೊಂದು ಭಾಗ ಪ್ರೈವೇಟ್ ಲ್ಯಾಂಡ್‌ನೊಳಗೆ ಪಾಸ್ ಆಗಿ ಹೋಗುತ್ತದೆ. ಅದಕ್ಕೆ ಪ್ರೈವೇಟ್ ಲಾಂಡ್‌ನ ಓನರ್ಸ್ ತಕರಾರು ಮಾಡಿದುದರಿಂದ ೭